# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ,ಬಿ.ಹೆಚ್. ರಸ್ತೆ,ತುಮಕೂರು-572 103 ☎:0816-2254546 ಫ್ಯಾಕ್ಸ್:0816-2270719


ದಿನಾಂಕ:24.04.2024

ಸಂಖ್ಯೆ:ತುವಿ:17 ನೇ ಘಟಿಕೋತ್ಸವ:2024-25:/62

CBCS-UUCMS

## : ಅಧಿಸೂಚನೆ :

**ವಿಷಯ: 2024 ರ ಜೂನ್ ಮಾಹೆಯಲ್ಲಿ ನಡೆಯಲಿರುವ ತುಮಕೂರು ವಿಶ್ವವಿದ್ಯಾನಿಲಯದ 17 ನೇ ವಾರ್ಷಿಕ ಘಟಿಕೋತ್ಸವಕ್ಕೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.**

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ: 18.04.2024

*******

2024 ರ ಜೂನ್ ಮಾಹೆಗಳಲ್ಲಿ ನಡೆಯಲಿರುವ ತುಮಕೂರು ವಿಶ್ವವಿದ್ಯಾನಿಲಯದ 17 ನೇ ವಾರ್ಷಿಕ ಘಟಿಕೋತ್ಸವಕ್ಕೆ ಪ್ರವೇಶ ಪಡೆಯುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಪ್ರಸ್ತುತ ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ನಿರ್ವಹಿಸಲ್ಪಟ್ಟ ವಿವಿಧ ಸ್ನಾತಕ ಶಿಕ್ಷಣ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಈ ಕೆಳಕಂಡ ಮಾಹೆಗಳಲ್ಲಿ ನಡೆದ ಪರೀಕ್ಷೆಗಳಲ್ಲಿ ಅರ್ಹ ಅಭ್ಯರ್ಥಿಗಳಿಂದ ಮಾತ್ರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ಮಾರ್ಚ್/ಏಪ್ರಿಲ್ 2023 ರಿಂದ ಸೆಪ್ಟಂಬರ್/ಅಕ್ಟೋಬರ್ 2023 ರವರೆಗೆ ನಡೆದ ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ತೆಗೆದುಕೊಂಡು ಪದವಿ ಪೂರ್ಣಗೊಳಿಸಿರುವ ಅಭ್ಯರ್ಥಿಗಳು.
2. ಆಗಸ್ಟ್ 2023 & ಜನವರಿ 2024 ರ ಮಾಹೆಗಳಲ್ಲಿ ನಡೆದ ಸ್ನಾತಕ ಶಿಕ್ಷಣ ಪದವಿ ಪರೀಕ್ಷೆಗಳನ್ನು ತೆಗೆದುಕೊಂಡು ಪದವಿ ಪೂರ್ಣಗೊಳಿಸಿರುವ ಅಭ್ಯರ್ಥಿಗಳು.

ಈ ಮೇಲ್ಕಂಡ ಅಭ್ಯರ್ಥಿಗಳು ತಮ್ಮ ಯು.ಯು.ಸಿ.ಎಂ.ಎಸ್. ತಂತ್ರಾಂಶದ ಲಾಗಿನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಸದರಿ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಿದ ನಂತರ ಕಾಲೇಜು/ವಿಭಾಗಗಳಿಗೆ ಅರ್ಜಿಯ ಪ್ರತಿಯನ್ನು ಸಲ್ಲಿಸುವುದು.

**ಪದವಿ ಪ್ರಮಾಣ ಪತ್ರಗಳಿಗೆ ನಿಗದಿಪಡಿಸಿದ ಶುಲ್ಕದ ವಿವರ ಕೆಳಕಂಡಂತಿದೆ:**

1. ಭಾರತೀಯ ವಿದ್ಯಾರ್ಥಿಗಳು : ರೂ. 550-00/-
2. ವಿದೇಶಿ ವಿದ್ಯಾರ್ಥಿಗಳು : ರೂ. 2,050-00/-

ಒಂದೊಮ್ಮೆ ಅಭ್ಯರ್ಥಿಯು "ವಿಶಿಷ್ಟ ಚೇತನ" ರಾಗಿದ್ದರೆ, ಈ ಸಂಬಂಧ ಸರ್ಕಾರಿ ಜಿಲ್ಲಾ ಆಸ್ಪತ್ರೆಯ ಶಸ್ತ್ರಚಿಕಿತ್ಸಕ ಅಧಿಕಾರಿಗಳಿಂದ ನೀಡಲ್ಪಟ್ಟ ಪ್ರಮಾಣಪತ್ರವನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

ಯಾವುದಾದರೂ ಅಭ್ಯರ್ಥಿಯ ಫಲಿತಾಂಶಗಳನ್ನು ತಡೆಹಿಡಿಯಲಾಗಿದ್ದರೆ, ಅಂತಹ ಅಭ್ಯರ್ಥಿಯು ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸುವ ಮುನ್ನ ಸೂಕ್ತ ತಿದ್ದುಪಡಿ ಮಾಡಿಸಿಕೊಂಡು, ಫಲಿತಾಂಶ ಬಿಡುಗಡೆಯಾದ ನಂತರವಷ್ಟೇ ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

ಅಭ್ಯರ್ಥಿಗಳಿಗೆ ಸ್ನಾತಕ ಶಿಕ್ಷಣ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಸುವರ್ಣಲೇಪಿತ ಬೆಳ್ಳಿ ಪದಕ/ನಗದು ಬಹುಮಾನಗಳನ್ನು ಘೋಷಿಸಲಾಗಿದ್ದರೆ, ಅಂತಹ ಅಭ್ಯರ್ಥಿಗಳು 17 ನೇ ವಾರ್ಷಿಕ ಘಟಿಕೋತ್ಸವಕ್ಕೆ **'ಖುದ್ದು ಹಾಜರಾಗುವ'** ಅರ್ಜಿಗಳನ್ನು ಸಲ್ಲಿಸಬೇಕು. ಇಲ್ಲವಾದರೆ ಅಂತಹ ಅಭ್ಯರ್ಥಿಗಳು ಘಟಿಕೋತ್ಸವದಲ್ಲಿ ಅವುಗಳನ್ನು ಸ್ವೀಕರಿಸಲು ಅನರ್ಹರಾಗುತ್ತಾರೆ. ಮುಂದೆ ಅವರು ಅವುಗಳನ್ನು ಪಡೆಯಬಯಸಿದರೆ ಮಾನ್ಯ ಕುಲಸಚಿವರು(ಪರೀಕ್ಷಾಂಗ) ಇವರ ಕಚೇರಿಯಿಂದ ಪಡೆದುಕೊಳಬೇಕಾಗುತದೆ.

ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಮುದ್ರಿತ ಅರ್ಜಿಗಳನ್ನು ಪರಿಶೀಲಿಸಿ ಸಹಿ ಮಾಡಿ, ದೃಢೀಕೃತ ಅಂಕಪಟ್ಟಿ ಹಾಗೂ ಇತ್ಯಾದಿಗಳೊಂದಿಗೆ ತಮ್ಮ ಕಾಲೇಜುಗಳ ಪ್ರಾಂಶುಪಾಲರಿಗೆ ಹಾಗೂ ವಿಭಾಗದ ಮುಖ್ಯಸ್ಥರಿಗೆ **ಅಂದೇ** ಸಲ್ಲಿಸತಕ್ಕದ್ದು.

**ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 13.05.2024**

**ವಿದ್ಯಾರ್ಥಿಗಳಿಗೆ ರೂ. 500-00 ಹೆಚ್ಚುವರಿ ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 16.05.2024**

**ವಿದ್ಯಾರ್ಥಿಗಳಿಗೆ ರೂ. 1000-00 ಗಳ ವಿಶೇಷ ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:21.05.2024.**

ಕಾಲೇಜಿನವರು ಘಟಿಕೋತ್ಸವ ಅರ್ಜಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ: **24.05.2024**

- **ಇ.ಎಂ.ಎಸ್ ತಂತ್ರಾಂಶದ ಮೂಲಕ ವಿದ್ಯಾರ್ಥಿಗಳು ಸಂಬಂಧಪಟ್ಟ ಕಾಲೇಜುಗಳಿಗೆ ಶುಲ್ಕವನ್ನು ಪಾವತಿಸಿ ಸ್ವೀಕೃತಿ ಅರ್ಜಿಯನ್ನು ಪಡೆಯತಕ್ಕದ್ದು, ಈ ಅರ್ಜಿಯ ವಿವರವನ್ನು ಕಾಲೇಜಿನ ಇ.ಎಂ.ಎಸ್ ತಂತ್ರಾಂಶದಲ್ಲಿ ನಮೂದಿಸತಕ್ಕದ್ದು.**
- ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ತಮ್ಮ ಯು.ಯು.ಸಿ.ಎಂ.ಎಸ್. ಲಾಗಿನ್ ಮೂಲಕ ಪಾವತಿಸುವುದು.
- ವಿದ್ಯಾರ್ಥಿಗಳು ಸಂಬಂದಪಟ್ಟ ಪದವಿಗೆ ಪ್ರವೇಶಾತಿ ಪಡೆಯುವ ಸಂದರ್ಭದಲ್ಲಿ ತಾವು ಅಪ್‌ಲೋಡ್ ಮಾಡಲ್ಪಟ್ಟ ಭಾವಚಿತ್ರವೇ ಅಂಕಪಟ್ಟಿ ಹಾಗೂ ಪದವಿ ಪ್ರಮಾಣಪತ್ರಗಳ ಮೇಲೆ ಮುದ್ರಿತವಾಗುವುದರಿಂದ, ಭಾವಚಿತ್ರ ಅಸ್ಪಷ್ಟವಾಗಿದ್ದಲ್ಲಿ ಅಥವಾ ಸೂಕ್ತ ರೀತಿಯಲ್ಲಿರದಿದ್ದಲ್ಲಿ ಸಂಬಂದಪಟ್ಟ ಕಾಲೇಜಿನ ಯು.ಯು.ಸಿ.ಎಂ.ಎಸ್. ನೋಡಲ್ ಅಧಿಕಾರಿಗಳನ್ನು ಭೇಟಿ ಮಾಡಿ ಸರಿಪಡಿಸಿಕೊಳ್ಳತಕ್ಕದ್ದು.
- ಕಾಲೇಜು/ವಿಭಾಗದವರು ಕಡ್ಡಾಯವಾಗಿ ವಿದ್ಯಾರ್ಥಿಗಳ ಸಮ್ಮುಖದಲ್ಲಿಯೇ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಭರ್ತಿ ಮಾಡುವುದು ಹಾಗೂ ಭರ್ತಿ ಮಾಡಿದ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ವಿದ್ಯಾರ್ಥಿಗಳಿಂದ ಸಹಿ ಪಡೆಯುವುದು.
- ಅಭ್ಯರ್ಥಿಗಳು ಅರ್ಜಿಗಳನ್ನು ನೇರವಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬಾರದು.

ಪ್ರಾಂಶುಪಾಲರು/ವಿಭಾಗದ ಮುಖ್ಯಸ್ಥರು ತಮ್ಮಲ್ಲಿರುವ ದಾಖಲೆಗಳ ಆಧಾರದಲ್ಲಿ ಅರ್ಜಿಗಳನ್ನು ಪರಿಶೀಲಿಸಿ, ಅರ್ಜಿ ಸಲ್ಲಿಸಲ್ಪಟ್ಟ ಅಭ್ಯರ್ಥಿಗಳ ಪಟ್ಟಿಯನ್ನು ತಂತ್ರಾಂಶದಿಂದ ಡೌನ್‌ಲೋಡ್ ಮಾಡಿಕೊಂಡು (ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಪಡೆದುಕೊಳ್ಳುವ ವಿಧಾನವನ್ನು ನಂತರ ತಿಳಿಸಲಾವುದು) ವಿಶ್ವವಿದ್ಯಾನಿಲಯಕ್ಕೆ **ದಿನಾಂಕ: 24.05.2024 ರೊಳಗೆ** ಸಲ್ಲಿಸುವುದು.

ಘಟಿಕೋತ್ಸವದ ನಿರ್ದಿಷ್ಟ ಸಮಯ, ದಿನಾಂಕ, ಸ್ಥಳ, ಮುಖ್ಯ ಅತಿಥಿಗಳ ಹೆಸರು ಇತ್ಯಾದಿ ವಿವರಗಳನ್ನು ಮುಂದೆ ತಿಳಿಸಲಾಗುವುದು.

**ಆದೇಶದ ಮೇರೆಗೆ**

**ಕುಲಸಚಿವರು(ಮೌಲ್ಯಮಾಪನ)**

**ಗೆ,**

1. **ಪ್ರಾಂಶುಪಾಲರುಗಳು, ಘಟಕ/ಸಂಯೋಜಿತ ಸ್ನಾತಕ ಶಿಕ್ಷಣ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**
2. **ಮುಖ್ಯಸ್ಥರು/ಸಂಯೋಜಕರು, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

**ಪ್ರತಿಗಳು :**

1. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. – **ಇಂದೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸುವುದು.**
5. ಮಾನ್ಯ ಕುಲಸಚಿವರು(ಮೌಲ್ಯಮಾಪನ), ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳು.
6. ಕಚೇರಿ ಪ್ರತಿ